ಅ) ಪುತ್ತೂರಿನಲ್ಲಿ ವಿದ್ಯುತ್ ಡಿವಿಜನ್ ಆಫೀಸು ಆಗಬೇಕು ಎನ್ನುವ ಬೇಡಿಕೆಯ ಮಹತ್ವವು ಸರ್ಕಾರದವರಿಗೆ ತಿಳಿದಿದೆಯೆ.

ಇ) ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಸಚಿವರು).—

ಅ) ಪುತ್ತೂರಿನಲ್ಲಿ ಹಾಲಿ ಮಂಡಳಿಯ ಉಪ ವಿಭಾಗಾ ಕಛೇರಿ ಕಾರ್ಯ ನಿರ್ವಹಿಸುತ್ತಿದೆ.

ಆ) ರಾಜ್ಯದಲ್ಲಿ ವಿಭಾಗ, ಉಪವಿಭಾಗದ ಪುನರ್ ರಚನೆ ಮಾಡುವ ಯೋಜನೆ ಹೊಂದಿದ್ದು, ಅದಕ್ಕಾಗಿ ಮಾಹಿತಿ ಸಂಗ್ರಹಿಸುತ್ತಿದೆ. ಇದು ಮಂಡಳಿಯ ಆರ್ಥಿಕ ಸ್ಥಿತಿಯನ್ನವಲಂಬಿಸಿದ್ದು ಈಗ ಕನಿಷ್ಟ ಬೇಡಿಕೆ ಪೂರೈಸುವಷ್ಟು ಮಾತ್ರ ಪುನರ್ ರಚನೆ ಮಾಡಲು ನಿರ್ಧರಿಸಲಾಗಿದೆ. ಆದ್ದರಿಂದ ಹೊಸ ವಿಭಾಗಗಳ ರಚನೆಯನ್ನು ಆವುಗಳ ಆಗತ್ಯ, ಮಂಡಳಿ ಆರ್ಥಿಕ ಸ್ಥಿತಿ ಇವುಗಳನ್ನು ಗಮನಿಸಿ ಸೂಕ್ತ ಕಾಲದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು.

ಇ) .ಅ' ನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಬೆಳ್ತಂಗಡಿಯಲ್ಲಿ ಕೈಗಾರಿಕಾ ವಸಾಹತು ಸ್ಥಾಪನೆ

೮೮೨. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ) —ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳ್ತಂಗಡಿಯಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸುವ ಬಗ್ಗೆ ಸರ್ಕಾರದ ಪ್ರಸ್ತಾವನೆ ಬಂದಿದ್ದು ೯ ಎಕರೆ ಸರ್ಕಾರಿ ಭೂಮಿ ಮಂಜೂರಾಗಿರುವುದು ನಿಜವೇ.

ಆ) ಇಷ್ಟು ಸಮಯವಾದರು ಕೈಗಾರಿಕಾ ಶೆಡ್ಡುಗಳನ್ನು ಕಟ್ಟದಿರಲು ಕಾರಣವೇನು.

ಇ) ನೀರು ಹಾಗೂ ವಿದ್ಯುತ್ ಒದಗಣೆಯನ್ನು ಮಾಡದಿರಲು ಕಾರಣವೇನು.

ಈ) ಕೈಗಾರಿಕಾ ಶೆಡ್ಡುಗಳ ನಿರ್ಮಾಣ ಯಾವಾಗ ಪ್ರಾರಂಭವಾಗುತ್ತದೆ ? ಮತ್ತು ಎಷ್ಟು ಸಮಯದೊಳಗೆ ಪೂರ್ತಿಯಾಗುತ್ತದೆ ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕೆ, ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ಹೌದು.

ಆ) ಗಡಿ ಗುರುತಿನ ವಿವರಗಳನ್ನು ೧೯೭೭ರಲ್ಲಿ ಒದಗಿಸಿರುವುದರಿಂದ ಕೈಗಾರಿಕಾ ವಸಾಹತುವಿನ ರೂಪರೇಖೆಯನ್ನು ರಚಿಸಲು ಸಾಧ್ಯವಾಗಲಿಲ್ಲ. ಅಲ್ಲದೆ ಉದ್ಯಮಿಗಳಿಂದ ಮಳಿಗೆಗಾಗಿ ಯಾವ ರೀತಿಯ ಬೇಡಿಕೆಯು ಬಂದಿರುವುದಿಲ್ಲ.

ಇ) ಈ ಸ್ಥಳದಲ್ಲಿ ಇನ್ನೂ ಕೈಗಾರಿಕಾ ವಸಾಹತುವನ್ನು ಸ್ಥಾಪಿಸಿಲ್ಲವಾದ್ದರಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಈ) ಸಮರ್ಪಕವಾದ ಬೇಡಿಕೆಯ ಸಮೀಕ್ಷೆಯನ್ನು ನಡೆಸಿದ ನಂತರ ಹಾಗೂ ಉದ್ಯಮಿಗಳ ಸರಿಯಾದ ಆಗತ್ಯಗಳನ್ನು ಆರಿತು ಮಳಿಗೆಗಳನ್ನು ಕಟ್ಟಲಾಗುವುದು.

ಹರಪನಹಳ್ಳಿ ತಾಲ್ಲೂಕಿನಲ್ಲಿ ಗ್ರಾಮಾಂತರ ವಿದ್ಯುದೀಕರಣ ಯೋಜನೆ

೮೭೪. ಶ್ರೀ ಬಿ. ಹೆಚ್. ಯಂಕಾನಾಯಕ (ಹರಪನಹಳ್ಳಿ).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ ಮತ್ತು ೧೯೮೮–೮೯ರಲ್ಲಿ ಬಳ್ಳಾರಿ ಜಿಲ್ಲೆ ಹರಪನ ಹಳ್ಳಿ ತಾಲ್ಲೂಕಿಗೆ ಗ್ರಾಮಾಂತರ ವಿದ್ಯುದ್ದೀಕರಣ ಯೋಜನೆಗೆ ಮಂಜೂರಾದ ಹಣವೆಷ್ಟು. ಸಾಗೂ ಈ ಪೈಕಿ ಬಿಡುಗಡೆ ಮಾಡಿದ ಹಣವೆಷ್ಟು.

ಆ) ಮೇಲ್ಕಂಡ ಎರಡು ವರ್ಷಗಳಲ್ಲಿ ಎಷ್ಟು ಹಳ್ಳಿಗಳಿಗೆ ಹಾಗೂ ಗ್ರಾಮಗಳಿಗೆ ವಿದ್ಯುತ್ ಒದಗಿಸಲಾಗಿದೆ (ವಿವರಗಳನ್ನೊದಗಿಸುವುದು)